ದೇವರಿಗೆ ಹಾಲು ಅರ್ಪಿಸಿ ಒಲಿಸಿಕೊಂಡ ಆಚಾರ್ಯರು

ಮೇಲುಕೋಟೆ : ಭಾರತದ ಪವಿತ್ರ ಶ್ರೀವೈಷ್ಣವ ಕ್ಷೇತ್ರ, ಮಂಡ್ಯಜಿಲ್ಲೆಯ ಮೇಲುಕೋಟೆ ಆಚಾರ್ಯರಾಮಾನುಜರ ಕರ್ಮಭೂಮಿ. ಇಂತಹ ಪವಿತ್ರ ಭೂಮಿಯಲ್ಲಿ ಜನಿಸಿದ ಸಂತ ಆಯಿಜನನ್ಯಾಚಾರ್ಯರ 675ನೇ ಜಯಂತ್ಯುತ್ಸವದ ನವೆಂಬರ್ 29ರಂದು ನಡೆಯಲಿದೆ

ಶ್ರೀವೈಷ್ಣವ ಪರಂಪರೆಗೆ ಮಹತ್ವದ ಕೊಡುಗೆ ನೀಡಿದ ಕರ್ನಾಟಕದ ಶ್ರೀವೈಷ್ಣವ ಸಂತಶ್ರೇಷ್ಠರಲ್ಲೊಬ್ಬರಾದ ಸ್ವಾಮಿ ಆಯಿ ಜನನ್ಯಾಚಾರ್ಯರು ಕ್ರಿ.ಶ.1344ರ [illegible] ಸಂವತ್ಸರದಲ್ಲಿ ಮೇಲುಕೋಟೆಯಲ್ಲಿ ಜನಿಸಿ, ಚೆಲುವನಾರಾಯಣನ ಸೇವೆ ಮಾಡಿದವರು. ರಾಮಾನುಜರ ಶಿಷ್ಯಪರಂಪರೆಯಲ್ಲಿ 14ನೇ [illegible]ಗಳಲ್ಲೊಬ್ಬರಾದ ಆಸೂರಿ ಪೆರುಮಾಳ್ ರವರು. ರಾಮಾನುಜಾಚಾರ್ಯರು ಮೇಲುಕೋಟೆಯಿಂದ ಶ್ರೀರಂಗಕ್ಕೆ ಹಿಂದಿರುಗಿದ ನಂತರ ಇಲ್ಲೇ ನೆಲೆ. ಯದುಗಿರಿಸಂಪತ್ಕುಮಾರನ ಸನ್ನಿಧಿಯಲ್ಲಿ ತೊಡಗಿದ್ದರು. ಇದೇ ಸಂಪ್ರದಾಯದಲ್ಲಿ 13ನೇ ಶತಮಾನದಲ್ಲಿ ಆಸೂರಿ ಲಕ್ಷ್ಮಣಾಚಾರ್ಯರ ಸತ್ಪುತ್ರರಾಗಿ ಶ್ರೀಆಸೂರಿ ದೇವರಾಜಪೆರುಮಾಳ್ ಅವತರಿಸಿದರು.

ದೇವರಾಜರು ಆಯಿಸ್ವಾಮಿಯಾಗಿದ್ದು :

ಶಾಸನದಾಸರೆಂದೂ ಹೆಸರು ಹೊಂದಿದ್ದ ದೇವರಾಜಪೆರುಮಾಳ್ ಶ್ರೀಚೆಲುವನಾರಾಯಣಸ್ವಾಮಿಗೆ ಮಾಲಾಕಾರರಂತೆ ಹೂವನ್ನು ಕಟ್ಟಿ. ರಾತ್ರಿವೇಳೆ [illegible]ವಾಗಿ ಪಟ್ಟಕೋಟರ [illegible] ಹಸುವಿನ ಹಾಲನ್ನು ಭಗವಂತನಿಗೆ ಅರ್ಪಿಸುತ್ತಿದ್ದರು. ಒಂದು ದಿನ ದೇವಾಲಯದಿಂದ ಹಾಲುತರಲು ವಿಳಂಬವಾದಾಗ ಸಾಕ್ಷಾತ್ ಭಗವಂತನೇ ಇಂದೇಕೆ ಆಯಿ(ತಾಯಿ) ಹಾಲು ಒದಗಿಲ್ಲ ಎಂದು ಕೇಳಿದನಂತೆ. ಹೀಗಾಗಿ ದೇವರಾಜರಿಗೆ ಅಂದಿನಿಂದ ಆಯಿ ಜನನ್ಯಾಚಾರ್ಯ ಎಂದೇ ಹೆಸರಾಯಿತು.

ಆಯಿಜನನ್ಯಾಚಾರ್ಯ ಸ್ವಾಮಿಯ ವಿಗ್ರಹ

ಮಣವಾಳಮಾಮುನಿ ಜೀಯರ್‌ಗೆ ಗುರುಗಳು :

ಶ್ರೀವೈಷ್ಣವ ದೇಗುಲಗಳನ್ನು ಜೀರ್ಣೋದ್ಧಾರ ಮಾಡಿದ ಆಚಾರ್ಯರಾದ ಶ್ರೀಮಣವಾಳ ಮಾಮುನಿಗೆ ಗುರುಗಳಾಗಿದ್ದ ಆಯಿಜನನ್ಯಾಚಾರ್ಯರು ಶ್ರೀವೈಷ್ಣವ ಸಂಪ್ರದಾಯದ ಸಾರಭೂತವಾದ ಹಲವು ಮಹತ್ವದ ವಿಶ್ಲೇಷಣೆಯೊಂದಿಗೆ ಜೀಯರ್‌ರ ಹತ್ತಾರು ಸಂದೇಹಗಳನ್ನು ಪರಿಹರಿಸುತ್ತಿದ್ದರು. ತಮಿಳುನಾಡಿನ ಆಳ್ವಾರ್ ತಿರುನಗರಿಯಲ್ಲಿ ಜೀಯರ್‌ಗೆ ಆಚಾರ್ಯಹೃದಯವೆಂಬ ದಿವ್ಯಪ್ರಬಂಧದ ಸಾರಗಳನ್ನು ತಿಳಿಸುವ ರಹಸ್ಯಗ್ರಂಥದ ಸಕಲಾರ್ಥಗಳನ್ನೂ ವಿವರಿಸಿ ಕಾಲಕ್ಷೇಪ ನಡೆಸುತ್ತಿದ್ದರು. ಆಯಿಯವರ ಬಳಿ ಮಣವಾಳಮಾಮುನಿಗಳ ಮೊಮ್ಮಗ ಜೀಯರ್ ನಾಯನಾರ್ ಸಹ ಕಾಲಕ್ಷೇಪ ಪಡೆದದ್ದು ವಿಶೇಷವಾಗಿದೆ.

ಆಚಾರ್ಯಹೃದಯ, ತಿರುಪ್ಪಾವೈ, ಶ್ರೀವಚನಭೂಷಣ, ತಿರುಮಾಲೈ, ಪೆರಿಯತಿರುಮೊಳಿ ವ್ಯಾಖ್ಯಾನಗಳು ಮತ್ತು ಉಪನಿಷದ್ ಸಾರವಾದ [illegible] ಅದ್ಭುತವಾದ ಸ್ತೋತ್ರ ಮತ್ತು ಮುಕ್ತ ಶ್ಲೋಕಗಳಲ್ಲದೆ, [illegible] ಪದ್ಯಗಳನ್ನೂ ಆಯಿಸ್ವಾಮಿ ರಚಿಸಿದ್ದಾರೆ. ಮಾಮುನಿಗಳು ರಚಿಸಿದ ಶ್ರೀಶಾಲಿದಾಸ ಗುರುಪ್ರಶಸ್ತಿ ಮತ್ತು ಶ್ರೀಶಾಲಿದಾಸ ಮುನಿಮಂಗಳವು ಆಯಿಯವರ ಜೀವನ ಮತ್ತು ಹಿರಿಮೆಯನ್ನು ಸಾರುತ್ತದೆ

ಶ್ರೀಭಾಷ್ಯಮತಿಮನ್ಮಥಮಂಥನ ವಿಚಾರಗೋಷ್ಠಿ :

ಆಚಾರ್ಯರ ಗ್ರಂಥಗಳ ವ್ಯಾಖ್ಯಾನಗಳ ಕುರಿತಂತೆ ನ. 28 ಮತ್ತು 29 ರಂದು ಎರಡುದಿನಗಳ ರಾಷ್ಟ್ರಮಟ್ಟದ ವಿಚಾರಗೋಷ್ಠಿಯಿದೆ. ತಿರುಪತಿ, ಶ್ರೀರಂಗಂ, ತಿರುವಲ್ಲಿಕೇಣಿ, ಆಂಧ್ರ ಸೇರಿದಂತೆ ವಿವಿಧ ಪ್ರಖ್ಯಾತ ಧಾರ್ಮಿಕಕ್ಷೇತ್ರಗಳ ಪ್ರಸಿದ್ಧ ವಿದ್ವಾಂಸರು ಭಾಗವಹಿಸಲಿರುವ ಗೋಷ್ಠಿಯಲ್ಲಿ ಆಯಿಸ್ವಾಮಿಗಳು ರಚಿಸಿದ ಆಚಾರ್ಯಹೃದಯ, ಶ್ರೀವಚನಭೂಷಣ ವ್ಯಾಖ್ಯಾನ ಗ್ರಂಥಗಳ ಉಪನ್ಯಾಸ ಮತ್ತು ಶ್ರೀಭಾಷ್ಯಮತಿಮನ್ಮಥಮಂಥನ-ವಿದ್ವತ್ ಸಭೆ ನಡೆಯಲಿದೆ. ಜಯಂತಿಯಂದು ಸಂಜೆ ಸನ್ನಿಧಿಗೆ ಚೆಲುವನಾರಾಯಣಸ್ವಾಮಿ ಉತ್ಸವ ನಡೆಯಲಿದೆ.

ಆಯಿ ಸ್ವಾಮಿಗಳ ದೇಗುಲ

ಎಲ್ಲರ ಸೌಭಾಗ್ಯ

ಶ್ರೀ ಮಣವಾಳ ಮಾಮುನಿಗಳ ಆಚಾರ್ಯರ ಮಹತ್ವವನ್ನು ನಾಡಿಗೆ ಪರಿಚಯಿಸಿದ [illegible] ಮೇಲುಕೋಟೆಯಲ್ಲೇ ವಾಸವಿದ್ದು, ಚೆಲುವನ ಸೇವೆಯಲ್ಲಿ ನಿರತರಾಗಿದ್ದರು. ಅವರ ಜಯಂತ್ಯುತ್ಸವವನ್ನು ಆಚರಿಸುವುದೇ ಸೌಭಾಗ್ಯ

-ಆಯಿ [illegible] ಶ್ರೀ[illegible]